# ಉಪ ತಹಶೀಲ್ದಾರರು, ನಾಡ ಕಾರ್ಯಾಲಯ, ಇಟ್ಟಿಗಿ ರವರ ನ್ಯಾಯಾಲಯ

| ಅರ್ಜಿದಾರರು | ತಕರಾರುದಾರರು |
|---|---|
| 1)ಎಸ್.ಎಂ.ಬಸಯ್ಯ ತಂದೆ ಕೊಟ್ರಯ್ಯ<br>2)ಪಾರ್ವತಮ್ಮ ಜಿ. ಗಂಡ ಭಾಸ್ಕರಪ್ಪ,<br>ಉತ್ತಂಗಿ ಗ್ರಾಮ, ಹಡಗಲಿ ತಾ. | 1)ಎಸ್.ಎಂ.ವೀರಯ್ಯ ತಂದೆ ಕೊಟ್ರಸ್ವಾಮಿ<br>2)ಎಸ್.ಎಂ.ನಾಗಭೂಷಣ ತಂದೆ ಕೊಟ್ರಸ್ವಾಮಿ<br>ಉತ್ತಂಗಿ ಗ್ರಾಮ, ಹಡಗಲಿ ತಾ.<br>{ಶ್ರೀ ಎಂ.ಬಿ.ಕೋರಿ, ವಕೀಲರು, ಹಡಗಲಿ} |

**ವಿವಾದಿತ ಜಮೀನಿನ ವಿವರ:**

| ಕ್ರ.ಸಂ. | ಗ್ರಾಮದ ಹೆಸರು | ಸರ್ವೆ ನಂಬರ್ | ವಿಸ್ತೀರ್ಣ | ತರಹೆ |
|---|---|---|---|---|
| 1. | ಉತ್ತಂಗಿ | 199/1 | 2–41 | ಖುಷ್ಕಿ |

**ಪೀಠಿಕೆ:–**

ಬಳ್ಳಾರಿ ಜಿಲ್ಲೆ ಹೂವಿನ ಹಡಗಲಿ ತಾಲೂಕಿನ ಉತ್ತಂಗಿ ಗ್ರಾಮದ ಸ.ನಂ.199/1 ವಿ:2–41 ಎಕರೆ ಜಮೀನಿಗೆ ಸಂಬಂಧಿಸಿದಂತೆ, ಉತ್ತಂಗಿ ಗ್ರಾಮದ ನಿವಾಸಿಯಾದ ಎಸ್.ಎಂ.ಬಸಯ್ಯ ತಂದೆ ದಿ// ಕೊಟ್ರಯ್ಯ ಮತ್ತು ಕೆ.ಎಂ.ಚಂದ್ರಮ್ಮ ಗಂಡ ಎಸ್.ಎಂ.ಬಸಯ್ಯ ಇವರು ಉತ್ತಂಗಿ ಗ್ರಾಮದ ನಿವಾಸಿಯಾದ ಶ್ರೀಮತಿ ಪಾರ್ವತಮ್ಮ ಜಿ. ಗಂಡ ದಿ// ಭಾಸ್ಕರಪ್ಪ ಇವರಿಗೆ ನೋದಾಯಿತ ದಸ್ತಾವೇಜು ನಂ.2590/15–16 ದಿ:21–10–2015 ರಂದು ಕ್ರಯಕ್ಕೆ ನೀಡಿರುತ್ತಾರೆ ಎಂದು ಉಪ ನೋಂದಣಾಧಿಕಾರಿಗಳು, ಹೂವಿನಹಡಗಲಿ ಇವರು ವರದಿ ಮಾಡಿರುತ್ತಾರೆ. ಗ್ರಾಮದಲ್ಲಿ ನಮೂನೆ 21 ರ ನೋಟಿಸನ್ನು ದಿನಾಂಕ 28–10–2015 ರಂದು ಜಾರಿ ಮಾಡಲಾಗಿ ನಿಗದಿತ ಅವಧಿಯೊಳಗೆ ಅಂದರೆ ದಿನಾಂಕ 31–10–2015 ರಂದು ಉತ್ತಂಗಿ ಗ್ರಾಮದ ನಿವಾಸಿಗಳಾದ 1)ಎಸ್.ಎಂ.ವೀರಯ್ಯ ತಂದೆ ಕೊಟ್ರಸ್ವಾಮಿ ಮತ್ತು 2)ಎಸ್.ಎಂ.ನಾಗಭೂಷಣ ತಂದೆ ಕೊಟ್ರಸ್ವಾಮಿ ಇವರು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು, ಇಟ್ಟಿಗಿರವರು ಎಂ.ನಂ.27/2015–16 ರ ಕಡತವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಉಭಯ ಪಕ್ಷದವರಿಗೆ ವಿಚಾರಣೆ ದಿ:20–01–2016 ರಂದು ಹಾಜರಾಗಲು ನೋಟೀಸ್ ನೀಡಲಾಯಿತು.

ಅರ್ಜಿದಾರರು ಮತ್ತು ತಕರಾರುದಾರು ಪ್ರಕರಣದ ವಿಚಾರಣೆಗೆ ಹಾಜರಾಗಿರುತ್ತಾರೆ. ಅರ್ಜಿದಾರ–1 ರವರು ಹಾಜರಾಗಿ ತಾನು ಪಾರ್ವತಮ್ಮ ಜಿ. ಇವರಿಗೆ ಖರೀದಿಗೆ ನೀಡಿರುತ್ತೇನೆ ಎಂದು, ತಕರಾರುದಾರರು ತನಗೆ ಸಹೋದರ ಆಗಿರುತ್ತಾರೆ. ಸದರಿ ಆಸ್ತಿಯು ನನ್ನ ಹೆಸರಿನಲ್ಲಿದ್ದು, ಕ್ರಯಕ್ಕೆ ನೀಡಿರುತ್ತೇನೆ. ತಕರಾರುದಾರರು ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಲು ಹಾಗೂ ಕ್ರಯಪತ್ರದ ಪ್ರಕಾರ ಆದೇಶ ಮಾಡಲು ಮೌಖಿಕವಾಗಿ ಕೋರಿರುತ್ತಾರೆ. ಅರ್ಜಿದಾರರು ಲಿಖಿತ ಹೇಳಿಕೆ, 11ಇ ನಕ್ಷೆ ಪ್ರತಿ, ಕಂಪ್ಯೂಟರ್ ಪಹಣಿ ಪ್ರತಿ, ಈ ನ್ಯಾಯಾಲಯದ ಆದೇಶ ಸಂ/ಕಂ/ನಾಕಾಇ/ಪಹಣಿ/2/06–07 ದಿ:20–9–2006 ರ ಪ್ರತಿ, ಓ.ಎಸ್.ನಂ.10/2016 ರ ಆದೇಶದ ಪ್ರತಿ, ಮೆಮೋ ಪ್ರತಿ, ಅಪೀಲು ಪ್ರತಿ, ಸ್ಕೆಚ್ ಪ್ರತಿ ಸಲ್ಲಿಸಿರುತ್ತಾರೆ. ತಕರಾರುದಾರರು ಹಾಜರಾಗಿ ಸದರಿ ಆಸ್ತಿಯು ಪಿತ್ರಾರ್ಜಿತ ಆಸ್ತಿಯಿಂದ ಬಂದಿದ್ದು, ಸದರಿ ಆಸ್ತಿಯನ್ನು ನಾವೇ ಖರೀದಿಸುವುದಾಗಿ, ಹಕ್ಕು ಬದಲಾವಣೆ ಮಾಡದಿರಲು ಮತ್ತು ಹೂವಿನಹಡಗಲಿ ಸಿವಿಲ್ ನ್ಯಾಯಾಲಯದಲ್ಲಿ ಈ ಬಗ್ಗೆ ದಾವೆ ಹೂಡಿರುವುದಾಗಿ ಮೌಖಿಕವಾಗಿ ತಿಳಿಸಿದರು. ತಕರಾರುದಾರರ ಪರ ವಕೀಲರು ಹಾಜರಾಗಿ ಲಿಖಿತ ತಕರಾರು ಅರ್ಜಿ, ಓ.ಎಸ್.ನಂ.10/2016 ತಡೆಯಾಜ್ಞೆ ಪ್ರತಿ, AIR 2000 MADRAS 516 ಪ್ರಕರಣದ ಉಧೃತ ಪ್ರತಿ ಸಲ್ಲಿಸಿರುತ್ತಾರೆ.

ಅರ್ಜಿದಾರರು ಮತ್ತು ತಕರಾರುದಾರರು ಸಲ್ಲಿಸಿದ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲಿಸಲಾಯಿತು. ತಕರಾರುದಾರರ ಪರ ವಕೀಲರು ಸಲ್ಲಿಸಿದ ಲಿಖಿತ ತಕರಾರು ಅರ್ಜಿಯಲ್ಲಿ ಸದರಿ ಜಮೀನು ನಾಡ ಕಾರ್ಯಾಲಯ, ಇಟ್ಟಿಗಿ ಇವರ ಆದೇಶದ ಪ್ರಕಾರ ತಕರಾರುದಾರರಿಗೆ ಮತ್ತು ಅರ್ಜಿದಾರರಿಗೆ ಸ.ನಂ.199/ಸಿ ಪೈಕಿ ವಿ:5–01 ಎಕ್ರೆ ಜಮೀನು ಬಂದಿರುತ್ತದೆ. ಕಾನೂನು ಪ್ರಕಾರ ಇಬ್ಬರು ಕೂಡಿಕೊಂಡು ವಿಭಾಗ ಮಾಡಿಕೊಂಡು ನಂತರ ಕಂದಾಯ ಪೋಡಿಗೆ ಅರ್ಜಿ ಸಲ್ಲಿಸಿ, ಅರ್ಜಿದಾರ ಇತನ ಜಮೀನು ಸ.ನಂ.199/1 ವಿ:2–51 ಎಕ್ರೆ ಮತ್ತು ತಕರಾರುದಾರ ಜಮೀನು ಸ.ನಂ.199/ಸಿ ವಿ:2–50 ಎಕರೆ ಜಮೀನು ಮಾಡಿಕೊಂಡು ನಂತರ ಖರೀದಿ ಕೊಡಬಹುದಿತ್ತು. ಲೇಟ್ ಕೊಟ್ರಯ್ಯ ಮತ್ತು ಲೇಟ್ ಬಸಲಿಂಗಮ್ಮ ಇವರಿಗೆ ಒಟ್ಟು 8 ಜನ ಮಕ್ಕಳು ಇವರಲ್ಲಿ 6 ಗಂಡು ಮಕ್ಕಳು 2 ಹೆಣ್ಣು ಮಕ್ಕಳು ಇದ್ದು, ದಿ:11–1–1986 ರಂದು ಪಾಲು ವಿಭಾಗವನ್ನು ಮಾಡಿಕೊಂಡಿದ್ದು, ಆ ಪ್ರಕಾರ ಅವರವರ ಆಸ್ತಿಯನ್ನು ಅವರವರೇ ಕಬಜಾ ವಹಿವಾಟು ಉಪಯೋಗ ಮಾಡಿಕೊಂಡು ಇರುತ್ತಾರೆ. ಸದರಿ ತಕರಾರುದಾರರು ಮತ್ತು ಅರ್ಜಿದಾರರು ಅಣ್ಣತಮ್ಮಂದಿರು ಇರುತ್ತಾರೆ. ಆದರೆ ಅರ್ಜಿದಾರ ತಕರಾರುದಾರರೊಂದಿಗೆ ವಿಭಾಗ ಮಾಡಿಕೊಳ್ಳದೇ ಪೋಡಿ ಮಾಡಿ ಸ.ನಂ.199/1 ವಿ:2–51 ಜಮೀನಿನ ಪಹಣಿ ಬರುವಂತೆ ಮಾಡಿಕೊಂಡು ಕಾನೂನು ಬಾಹಿರವಾದ ಕ್ರಮದಲ್ಲಿ ಖರೀದಿ ಮಾಡಿಕೊಟ್ಟಿದ್ದು ಇರುತ್ತದೆ. ದಿ:11–1–1986ರ ಪಾಲುವಿಭಾಗ ಪತ್ರದಲ್ಲಿ ತಾವು ಹಂಚಿಕೊಂಡ ಜಮೀನನ್ನು ಇನ್ನೊಬ್ಬರಿಗೆ ಮಾರಾಟ ಮಾಡಬೇಕಾದಲ್ಲಿ ಅಥವಾ ಕೊಡಬೇಕಾದಲ್ಲಿ ಅಣ್ಣತಮ್ಮಂದಿರನ್ನು ವಿಚಾರಿಸಿ ಇವರಲ್ಲಿ ಯಾರೂ ಖರೀದಿ ಮಾಡಲು ಒಪ್ಪದಿದ್ದ ಪಕ್ಷದಲ್ಲಿ ಇನ್ನೊಬ್ಬರಿಗೆ ಮಾಡತಕ್ಕದ್ದು ಅಂತಾ ಬರೆಸಿಕೊಂಡದ್ದು ಇರುತ್ತದೆ. ಅರ್ಜಿದಾರರು ಖರೀದಿಗೆ ಕೊಟ್ಟ ಜಮೀನು ಉತ್ತರದ ಕಡೆ ಬರುತ್ತದೆ. ತಕರಾರುದಾರರ ಜಮೀನು ದಕ್ಷಿಣದ ಕಡೆ ಬರುತ್ತದೆ. ಸದರಿ ಜಮೀನುಗಳು ಆಜು ಬಾಜು ಇರುತ್ತವೆ. ಖರೀದಿ ಕೊಟ್ಟ ಜಮೀನಿನಿಂದ ತಕರಾರುದಾರರ ಜಮೀನಿಗೆ ದಾರಿಯ ತೊಂದರೆ ಇದ್ದು, ಖರೀದಿ ಮಾಡಿದವರಿಂದ ತಕರಾರುದಾರರಿಗೆ ತೊಂದರೆ ಆಗಿಬರುತ್ತದೆ. ಆದ್ದರಿಂದ ತಕರಾರುದಾರರು ಸದರಿ ಜಮೀನನ್ನು ಖರೀದಿ ಮಾಡಲು ತಯಾರಿರುತ್ತಾನೆಂದು ಮತ್ತು ಪೂರ್ವಜರ ಜಮಮೀನು ನಮ್ಮಲ್ಲಿಯೇ ಇರಬೇಕೆಂದು ಇಚ್ಚೆ ಹೊಂದಿದ್ದು ಇರುತ್ತದೆ. ಅರ್ಜಿದಾರ ತನ್ನ ಜಮೀನನ್ನು ಮಾರುವಾಗ ತಕರಾರುದಾರರನ್ನು ಕೇಳದೆ ಮಾರಿದ್ದು ಇರುತ್ತದೆ. ಇದರಿಂದ ತಕರಾರುದಾರರಿಗೆ ತುಂಬಲಾರದ ಲುಕ್ಸಾನು ಆಗಿರುತ್ತದೆ. ತಕರಾರುದಾರರು ಮಾನ್ಯ ಸಿವಿಲ್ ನ್ಯಾಯಾಲಯ್, ಹೂವಿನಹಡಗಲಿಯಲ್ಲಿ ಅಸಲು ದಾವೆ ಸಂಖ್ಯೆ 152/2015ನ್ನು ಸಲ್ಲಿಸಿದ್ದು ಇರುತ್ತದೆ. ಮತ್ತು ಮಾನ್ಯ ಹೊಸಪೇಟೆ ನ್ಯಾಯಾಲಯದಲ್ಲಿ ಅಸಲು ದಾವ ಸಂಖ್ಯೆ 10/2016 ನ್ನು ಸಲ್ಲಿಸಿದ್ದು ಇರುತ್ತದೆ. ಕಾರಣ ನ್ಯಾಯಾಲಯದ ಆದೇಶವಾಗುವವರೆಗೂ ಅರ್ಜಿದಾರರು ಖರೀದಿ ಕೊಟ್ಟವರ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಬಾರದೆಂದು ವಿನಂತಿಸಿರುತ್ತಾರೆ. ತಕರಾರುದಾರರು ಮಾನ್ಯ ಸಿವಿಲ್ ನ್ಯಾಯಾಲಯ, ಹೊಸಪೇಟೆ ಇವರು ದಿ:16–1–2016 ರಂದು ತಡೆಯಾಜ್ಞೆ ಆದೇಶ ಮಾಡಿರುತ್ತಾರೆ.

ಅರ್ಜಿದಾರ-2 ರವರು ಸಲ್ಲಿಸಿದ ಲಿಖಿತ ಹೇಳಿಕೆಯಲ್ಲಿ ಉತ್ತಂಗಿ ಗ್ರಾಮದ ಸ.ನಂ.199/ಸಿ ವಿ:5-01 ಎಕ್ರೆ ಜಮೀನಿನ ಬಗ್ಗೆ ತಮ್ಮ ನ್ಯಾಯಾಲಯದ ಆದೇಶ ಸಂ:ಕಂ:ಪಹಣಿ:2:06-07 ದಿ:20-9-2006 ರ ಆದೇಶ ಪ್ರಕಾರ ಎಸ್.ನಾಗಭೂಷಣ ಇವರಿಗೆ 2-50 ಹಾಗೂ ಎಸ್.ಎಂ.ಬಸಯ್ಯ ಇವರಿಗೆ 2-51 ಎಕರೆ ಆದೇಶವಾಗಿದ್ದು, ಅದರ ಮೇಲೆ ಯಾವುದೇ ಅಪೀಲು ಕಳೆದ 10 ವರ್ಷದಿಂದ ಇರುವುದಿಲ್ಲ. ಎಸ್.ಎಂ.ಬಸಯ್ಯ ಇವರು ತಮ್ಮ ಹೆಸರಿನಲ್ಲಿ ಪಹಣಿ ಮಾಡಿಸಿಕೊಂಡಿದ್ದು, ತಮ್ಮ ಹಕ್ಕು ಅಧೀನ ಅನುಭವದಲ್ಲಿದ್ದು, ಸದರಿ ಭೂಮಿಯ ಪೈಕಿ 10 ಸೆಂಟ್ಸ್ ಭೂಮಿಯನ್ನು ನಂದಿಹಳ್ಳಿ ದಾರಿಗೆ ಬಿಟ್ಟು ಉಳಿದ 2-41 ಎಕರೆ ಭೂಮಿಯನ್ನು 1ನೇ ಅರ್ಜಿದಾರ 2ನೇ ಅರ್ಜಿದಾರರಿಗೆ ನೋಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ. ಈ ಖರೀದಿ ವ್ಯವಹಾರ ಆಗುವ ವಿಷಯ ಈ ಮೊದಲೇ ತಕರಾರುದಾರರಿಗೆ ಗೊತ್ತಿದ್ದು, ಆವಾಗ ಯಾವುದೇ ತಕರಾರು ಮಾಡಿರುವುದಿಲ್ಲ. ಮತ್ತು 11ಇ ನಕ್ಷೆ ಮಾಡುವ ಸಂದರ್ಭದಲ್ಲಿಯೂ ಅಂದರೆ ಜುಲೈ 2015 ರಲ್ಲಿ ಸರ್ವೇ ಮಾಡುವಾಗಲೂ ಮಾಹಿತಿ ಇದ್ದರೂ ತಕರಾರು ಮಾಡದೇ, ದಿ:21-10-15 ರಂದು ನೋಂಣಿ ಮಾಡುವಾಗಲೂ ತಕರಾರು ಮಾಡದೇ ಈಗ ತಕರಾರು ಮಾಡಿರುವುದು ಕಾನೂನಿಗೆ ವಿರುದ್ಧವಾಗಿದ್ದು, ವಜಾಗೊಳ್ಳಲು ಯೋಗ್ಯವಾಗಿದೆ. ಹೊಸಪೇಟೆ ಸಿವಿಲ್ ನ್ಯಾಯಾಲಯದ ದಾವಾ ಸಂಖ್ಯೆ 10/2016 ಆಗಿದ್ದು, ಆದ ಕಾರಣ ಖಾತಾ ಬದಲಾವಣೆ ಮಾಡಬೇಡಿರಿ ಎಂದು ತಕರಾರು ಹಾಕಿರುವುದು ದಿಕ್ಕು ತಪ್ಪಿಸುವುದಾಗಿದೆ. ಹೊಸಪೇಟೆ ನ್ಯಾಯಾಲಯದಲ್ಲಿ ಹಾಕಿರುವ ದಾವೆಯು ತನ್ನ ಹೊಲಕ್ಕೆ ದಾರಿ ಬಿಡಲಿಲ್ಲವೆಂದು ಸುಳ್ಳು ಮಾಹಿತಿ ಕೊಟ್ಟು ಹಾಕಿರುವುದು, ನ್ಯಾಯಾಲಯದಲ್ಲಿ ಸಲ್ಲಿಸಿದ ದಾಖಲೆಗಳನ್ನು ಗಮನಿಸಿದಾಗ ಗುರುತಿಸಿದ ಜಾಗದಲ್ಲಿ ಬಂಡಿ ದಾರಿ ಬಿಡಲು ನ್ಯಾಯಾಲಯಕ್ಕೆ ಹೋಗಿದ್ದು ಇದ್ದು, ಅದಕ್ಕೂ ಈಗ ಖಾತೆ ಬದಲಾವಣೆಗೂ ಯಾವುದೇ ಸಂಬಂಧವಿರುವುದಿಲ್ಲ. ಕರ್ನಾಟಕ ಭೂ ಕಂದಾಯ ಅಧಿನಿಯಮ ಪ್ರಕಾರ ಯಾವುದೇ ನೋಂದಣಿ ದಾಖಲೆ ಆಧಾರದ ಮೇಲೆ ಖಾತೆ ಬದಲಾವಣೆ ಮಾಡಬೇಕಾಗುತ್ತದೆ. ಸದರಿ ನೋಂದಾಯಿತ ಕ್ರಯಪತ್ರವನ್ನು ಕಾನೂನು ಪ್ರಕಾರ ನ್ಯಾಯಾಲಯದಿಂದ ರದ್ದು ಮಾಡಿಸದ ಹೊರತು ಕ್ರಯಪತ್ರ ವಿರುದ್ಧ ತಕರಾರು ಮಾಡಲು ಹಕ್ಕು ಇರುವುದಿಲ್ಲವಾದ್ದರಿಂದ ತಕರಾರನ್ನು ತಳ್ಳಿ ಹಾಕಿ ಖರೀದಿದಾರರ ಹೆಸರಿನಲ್ಲಿ ಖಾತೆ ಬದಲಾವಣೆಗೆ ಆದೇಶ ಮಾಡಬೇಕೆಂದು ಪ್ರಾರ್ಥಿಸಿರುತ್ತಾರೆ.

ಅರ್ಜಿದಾರರು ಓ.ಎಸ್.ನಂ.10/2016 ರಲ್ಲಿ ಆದೇಶ ಮಾಡಿರುವ ಪ್ರತಿಯನ್ನು ಸಲ್ಲಿಸಿದ್ದು, ದಿ:21-4-2016 ರಂದು ಮಾನ್ಯ ಸಿವಿಲ್ ನ್ಯಾಯಾಲಯವು ಹೊಲಕ್ಕೆ ಹೋಗುವ ದಾರಿಗೆ ಸಂಬಂಧಿಸಿದಂತೆ 10 ಅಡಿ ದಾರಿ ಬಿಟ್ಟುಕೊಡುವ ಬಗ್ಗೆ ಡ್ರಾ ಡಿಕ್ರಿ ಆದೇಶ ಮಾಡಿರುತ್ತಾರೆ. ಇದರಿಂದ ದಾರಿಗೆ ಸಂಬಂಧಿಸಿದ ಸಮಸ್ಯೆ ರಾಜಿಯಲ್ಲಿ ಮುಕ್ತಾಯವಾಗಿರುತ್ತದೆ. ತಕರಾರುದಾರರು ಹೂವಿನಹಡಗಲಿ ಸಿವಿಲ್ ನ್ಯಾಯಾಲಯದಲ್ಲಿ ಈ ಬಗ್ಗೆ ದಾವೆ ಹೂಡಿರುವುದಾಗಿ ಮೌಖಿಕವಾಗಿ ತಿಳಿಸಿದ್ದು, ಇದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. AIR 2000 MADRAS 516 ಪ್ರಕರಣದ ಉದ್ಧೃತ ಪ್ರತಿಯಲ್ಲಿ ಹಿಂದೂ ವಾರಸಾ ಕಾಯ್ದೆ ಅಡಿ ಮೊದಲ ಹೆಂಡತಿ ಮಕ್ಕಳು ಮತ್ತು ಎರಡನೇ ಹೆಂಡತಿ ಮಕ್ಕಳ ನಡುವಿನ ಪಾಲಿನ ಕುರಿತು ಮಾಡಿದ ಆದೇಶವಾಗಿರುತ್ತದೆ. ದಿನಾಂಕ: 11-1-1986 ರಂದು ಪಾಲು ವಿಭಾಗವನ್ನು ಮಾಡಿಕೊಂಡ ಬಗ್ಗೆ ಉಭಯರು ತಿಳಿಸಿದ್ದು, ಸದ್ರಿ ಪಾಲು ವಿಭಾಗದ ದಾಖಲೆಯನ್ನು ಉಭಯರು ಸಲ್ಲಿಸಿರುವುದಿಲ್ಲ. ಈ ನ್ಯಾಯಾಲಯದಿಂದ ಪ್ರಕರಣ ಸಂ:ಕಂ:ಪಹಣಿ:2:06-07 ದಿ:20-9-2006 ರಂದು ಸ.ನಂ.199/ಸಿ ವಿ:5-01 ಎಕ್ರೆ ಜಮೀನನ್ನು ಪಾಲು ವಿಭಾಗ ಪ್ರಕಾರ ಎಸ್.ಎಂ.ನಾಗಭೂಷಣ ತಂದೆ ಲೇಟ್ ಕೊಟ್ರಯ್ಯ ಇವರಿಗೆ 2-50 ಹಾಗೂ ಎಸ್.ಎಂ.ಬಸಯ್ಯ ತಂದೆ ಲೇಟ್ ಕೊಟ್ರಯ್ಯ ಇವರಿಗೆ 2-51 ಎಕರೆ ಆದೇಶವಾಗಿರುತ್ತದೆ. ತಮ್ಮ ಪಾಲಿಗೆ ಬಂದ ಆಸ್ತಿ ಪೈಕಿ 2-41 ಎಕರೆ ಜಮೀನನ್ನು ಅರ್ಜಿದಾರ-1 ರವರು ಅರ್ಜಿದಾರ-2 ರವರಿಗೆ ನೋಂದಾಯಿತ ಕ್ರಯ ಮೂಲಕ ಮಾರಾಟ ಮಾಡಿರುತ್ತಾರೆ. ಈಗ ತಕರಾರುದಾರರು ಸದರಿ ಜಮೀನನ್ನು ತಾವೇ ಖರೀದಿ ಮಾಡುವುದಾಗಿ ತಿಳಿಸುತ್ತಾ, ವಿಚಾರಣೆ ವೇಳೆ ಲಿಖಿತ ಹೇಳಿಕೆಯಲ್ಲಿ ತಿಳಿಸಿರುತ್ತಾರೆ. ಈ ಬಗ್ಗೆ ಅರ್ಜಿದಾರ-1 ರವರು ವಿಚಾರಣೆ ವೇಳೆ ತಾನು ಅರ್ಜಿದಾರ-2 ರವರಿಗೆ ಮಾರಾಟ ಮಾಡಿರುವುದಾಗಿ ಮೌಖಿಕವಾಗಿ ತಿಳಿಸಿದ್ದು, ತಕರಾರುದಾರರಿಗೆ ಮಾರುವ ಬಗ್ಗೆ ಯಾವುದೇ ಅಭಿಪ್ರಾಯವನ್ನು ತಿಳಿಸಿರುವುದಿಲ್ಲ. ಅರ್ಜಿದಾರ-2 ರವರು ಖರೀದಿ ನೋಂದಣಿ ವೇಳೆ ವ್ಯವಸಾಯಗಾರ ಕುಟುಂಬದ ಸದಸ್ಯ ದೃಢೀಕರಣ ಪತ್ರದ ಪ್ರತಿ ಸಲ್ಲಿಸಿದ್ದು, ಸೋಗಿ ಗ್ರಾಮದ ಸ.ನಂ.356/ಬಿ/ಆ ವಿ:2-50 ಎಕರೆ ಜಮೀನನ್ನು ಹೊಂದಿರುತ್ತಾರೆ. ತಕರಾರುದಾರರು ತಮ್ಮ ಹಕ್ಕನ್ನು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಸಾಭೀತು ಪಡಿಸಿಕೊಳ್ಳುವ ಅವಶ್ಯಕತೆ ಇರುತ್ತದೆ. ಆದ್ದರಿಂದ ಈ ಕೆಳಕಂಡಂತೆ ಆದೇಶ.

ಸಂ/ಕಂ/ನಾ.ಕಾ.ಇ/ಪಹಣಿ/ವಿವಾದ/10/2015-16 ದಿನಾಂಕ:24-08-2016

**ಆದೇಶ**

ಪೀಠಿಕೆಯಲ್ಲಿ ವಿವರಿಸಿದ ವಾಸ್ತವಾಂಶ ಮತ್ತು ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 128 ಮತ್ತು 129ರ ಪ್ರಕಾರ ಎಂ.ನಂ.27/2015-16 ರ ಪ್ರಕರಣದಲ್ಲಿ ನೋಂದಾಯಿತ ಕ್ರಯಪತ್ರದ ಪ್ರಕಾರ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ. ತಕರಾರುದಾರರು ತಮ್ಮ ಹಕ್ಕನ್ನು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಸಾಭೀತು ಪಡಿಸಿಕೊಂಡು ಪರಿಹಾರ ಕಂಡುಕೊಳ್ಳಲು ಆದೇಶಿಸಿದೆ.

ಉಪತಹಶೀಲ್ದಾರರು
ನಾಡ ಕಾರ್ಯಾಲಯ
ಹಡಗಲಿ ತಾಲ್ಲೂಕು

ಪ್ರತಿಯನ್ನು,

1. ಅರ್ಜಿದಾರರು ಮತ್ತು ತಕರಾರುದಾರು ಇವರಿಗೆ
2. ಭೂಮಿ ಕೇಂದ್ರ, ತಾಲೂಕು ಕಾರ್ಯಾಲಯ, ಹೂವಿನಹಡಗಲಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
3. ಶುದ್ಧಪ್ರತಿ ಕಡತಕ್ಕೆ.